(ಇಂದು ದಿನಾಂಕಃ 21-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆಃ ಶ್ರೀ.ವಿ. ವಿ.ಸಿ ಎದುರುದಾರರ ಪರವಕೀಲರಿಂದ**

1. ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಂತಹ ವಿಷಯಗಳು ಸರಿಯಾಗಿವೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ.

- ಅಧಿಕಾರ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿ.ಆರ್-1 ಎಂದು, ಗುರುತಿಸಲಾಯಿತು.
- ಚಕ್ ಹಾಜರುಪಡಿಸಿದ್ದು ಅದನ್ನು ನಿ.ಆರ್-2 ಎಂದು, ಗುರುತಿಸಲಾಯಿತು.
- ರಿಟನ್ ಸ್ಲೀಪ ಮೆಮೊ ಹಾಜರುಪಡಿಸಿದ್ದು ಅದನ್ನು ನಿ.ಆರ್-3 ಎಂದು, ಗುರುತಿಸಲಾಯಿತು.
- ಸೂಚನಾ ಪತ್ರ ಹಾಜರುಪಡಿಸಿದ್ದು ಅದನ್ನು ನಿ.ಆರ್-4 ಎಂದು, ಗುರುತಿಸಲಾಯಿತು.
- ವಿಮೆ ಪಾಲಿಸಿಯನ್ನು ರದ್ದು ಮಾಡಿದ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿ.ಆರ್-5 ಎಂದು, ಗುರುತಿಸಲಾಯಿತು.
- ಸಮನ್ಸ ನೀಡಿದ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಆರ್-6 ಎಂದು, ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀಎಸ್.ಎಸ. ಎ ಅರ್ಜಿದಾರ ಪರ ವಕೀಲರಿಂದಃ**

1. ಚಕ್ಸ ಬೌನ್ಸ ಆದ ನಂತರ ಲೀಗಲ್ ನೋಟಿಸ್ಸು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಚಕ್ಸ ಬೌನ್ಸ ಆದ ನಂತರ ವಿಮೆ ಪಾಲಿಸಿ ಕ್ಯಾನ್ಸಲ್ ಮಾಡಿರುತ್ತೇನೆ. ಚಕ್ಸ ಬೌನ್ಸ ಆದ ನಂತರ ದಿಃ 15-03-2020 ರಂದು ಅವರಿಗೆ ನೋಟಿಸ್ಸು ಕೊಟ್ಟಿರುತ್ತೇನೆ. ದಿಃ 15-03-2020 ರಂದು ನೀಡಿದ ನೋಟಿಸ್ ಅವರಿಗೆ ತಲುಪಿದ ಬಗ್ಗೆ ನಾನು ಹಿಂಬರಹ ಸಲ್ಲಿಸಿಲ್ಲ. ಸಾಕ್ಷಿ ಮುಂದುವರೆದು ಕೊವಿಡ್ ಇದ್ದ ಬಗ್ಗೆ ಆ ಸಮಯದಲ್ಲಿ ಹಿಂಬರಹ ಬಂದಿರುವುದಿಲ್ಲ ಎಂದು ಹೇಳುತ್ತಾರೆ. ಅಂಚೆ ಹಿಂಬರಹವನ್ನು ನಾನು ಸಲ್ಲಿಸಿಲ್ಲ. ನಾನು 1 ನೇ ಎದುರುದಾರರಿಗೆ ಯಾವುದೇ ನೋಟ್ಟಿಸ್ಸು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಅಪಘಾತ ಆದ ನಂತರ ಅರ್ಜಿದಾರರು

ಪರಿಹಾರದ ಹಣ ಕೇಳುತ್ತಾರೆ, ಅವರಿಗೆ ಪರಿಹಾರದ ಹಣ ಕೊಡಬಾರದು ಎಂಬ ಉದ್ದೇಶದಿಂದ ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಕಂಪನಿಯ ನೌಕರಾನಾಗಿದ್ದು, ಪರಿಹಾರವನ್ನು ಕೊಡಬಾರದು ಅನ್ನುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಆದಾಗ ವಿಮೆ ಪಾಲಿಸಿ ಚಾಲ್ತಿಯಲ್ಲಿ ಇತ್ತು ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ವಿಷಯಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.